ಕನ್ನಡ ಅಭಿವೃದ್ಧಿ ಪ್ರಾಧಿಕಾರವು ದಿನಾಂಕ 3-12-21 ರಂದು ಆಯೋಜಿಸಿದ್ದ 'ವೈದ್ಯಕೀಯ ವಲಯದಲ್ಲಿ ಕನ್ನಡ ಕಾರ್ಯಾಗಾರ' ದಲ್ಲಿ ಮಕ್ಕಳ ವಿಭಾಗದ ಪ್ರಾಧ್ಯಾಪಕರು ಹಾಗು ಮುಖ್ಯಸ್ಥರಾದ ಡಾ. ಅ ರಾ ಸೋಮಶೇಖರ ಅವರು 'ಕನ್ನಡದಲ್ಲಿ ಆರೋಗ್ಯ ಮಾಹಿತಿ' ಬಗ್ಗೆ ವಿಷಯ ಮಂಡನೆ ಮಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಖ್ಯಾತ ಚಲನಚಿತ್ರ ನಿರ್ದೇಶಕರಾದ ಟಿ ಎಸ್ ನಾಗಾಭರಣ ವಹಿಸಿದ್ದರು. ಕಾರ್ಯಾಗಾರವನ್ನು ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ನಿವೃತ್ತ ನಿರ್ದೇಶಕರಾದ ಡಾ. ವಿಜಯಲಕ್ಷ್ಮಿ ದೇಶಮಾನೆ ವಹಿಸಿದ್ದರು. ಸಮಾರೋಪ ಭಾಷಣವನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಸಚ್ಚಿದಾನಂದ ಎಸ್ ಮಾಡಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕುಲಸಚಿವರಾದ ಎನ್ ಎಮ್ ನಾಗರಾಜ ಮತ್ತು ಆರೋಗ್ಯ ಹಾಗು ಕುಟುಂಬ ಕಲ್ಯಾಣ ಸೇವೆಗಳು ಇಲಾಖೆಯ ಆಯುಕ್ತರು ಡಿ ರಂದಿಪ್ ಆಗಮಿಸಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಾಮ ನಿರ್ದೇಶಿತ ಸದಸ್ಯರಾದ ಡಾ. ಸಿ ಎ ಕಿಶೋರ್ ಉಪಸ್ಥಿತರಿದ್ದರು. ಹಿರಿಯ ಕನ್ನಡ ಚಿಂತಕರಾದ ಶ್ರೀ ಸುಚೇಂದ್ರ ಪ್ರಸಾದ್ ' ವೈದ್ಯಕೀಯ ವಲಯದಲ್ಲಿ ಕನ್ನಡ ಸಮನ್ವಯ ' , ಡಾ ಸಿ ಎ ಕಿಶೋರ್ ರವರು ' ಅನ್ಯ ಭಾಷೆ ಕಿವಿ ತಲುಪುತ್ತದೆ, ಕನ್ನಡ ಭಾಷೆ ಹೃದಯ ತಲುಪುತ್ತದೆ', ಹಾಗು ಹಿರಿಯ ಅಂಕಣಕಾರರಾದ ಶ್ರೀ ರಾಮನಾಥ ಎನ್ ಅವರು 'ವೈದ್ಯಕೀಯ ವಲಯದಲ್ಲಿ ಕನ್ನಡದ ಅನಿವಾರ್ಯತೆ' ಕುರಿತಾಗಿ ವಿಷಯ ಮಂಡನೆ ಮಾಡಿದರು.

